**ಸಿ.ಸಿ. ನಂಬ್ರ: 2794/2016** **PW-1**

ದಿನಾಂಕ: 08.06.2026

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ಶಿಕಾರಿಪುರದಲ್ಲಿ ನಿಮ್ಮ ವಿರುದ್ದ ದಾಖಲಾದ ಚೆಕ್ಕು ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಮ್ಮ ಕಿರಣ್ ರವರು ಒಂದು ಪ್ಲಾಟ್ ನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀವು ಕೈಗಡ ಸಾಲವನ್ನು ಪಡೆದು ನಿಮ್ಮ ತಮ್ಮನಿಗೆ ಸಹಾಯ ಮಾಡಿದ್ದರಿಂದ ಸದ್ರಿ ಸಾಲದ ಹಣವನ್ನು ತೀರಿಸಲು ನೀವು ಚೆಕ್ಕನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ಖಾಲಿ ಚೆಕ್ಕನ್ನು ಪಡೆದು ದುರಪಯೋಗಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮ ಮದುವೆಯ ಚಿನ್ನವನ್ನು ನೋಡಿ ಕೊಡುತ್ತೇನೆಂದು ಪಡೆದುಕೊಂಡಿದ್ದರು ಎಂದು ಹೇಳಿದ್ದು ಯಾವಾಗ ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ಮದುವೆಯಾದ 3 ತಿಂಗಳಲ್ಲಿ ಎಂದು ನುಡಿಯುತ್ತಾರೆ. ಸದ್ರಿ ಚಿನ್ನ ಏನಾಯಿತು ಎಂದರೆ ಸಾಕ್ಷಿ

ಅವರು ಅಡಮಾನ ಇಟ್ಟಿರುತ್ತಾರೆ ಎಂದು ಅವರೇ ಹೇಳಿದ್ದರು ಎಂದು ನುಡಿಯುತ್ತಾರೆ. ನೀವು ಬೆಂಗಳೂರಿನಿಂದ ಊರಿಗೆ ಬರುವ ಸಮಯದಲ್ಲಿ ನಿಮ್ಮ ಮದುವೆಗೆ ಕೊಟ್ಟಿದ್ದ ಚಿನ್ನವನ್ನು ನೀವೇ ತಂದಿದ್ದು ಆರೋಪಿಯು ಯಾವುದೇ ಚಿನ್ನವನ್ನು ಕೇಳಿದ್ದಿರಲಿಲ್ಲ ಹಾಗೂ ನೀವು ಆರೋಪಿಗೆ ಯಾವುದೇ ಚಿನ್ನವನ್ನು ಕೊಟ್ಟಿರುವುದಿಲ್ಲ ಹಾಗೂ ಆರೋಪಿಯು ಅಡಮಾನ ಇಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ.

ನೀವು ಯಾವಾಗ ಕೆಲಸದಲ್ಲಿ ಇದ್ದಿದ್ದೀರಿ ಎಂದರೆ ಸಾಕ್ಷಿ 2005-06 ರಲ್ಲಿ ಎಂದು ನುಡಿಯುತ್ತಾರೆ. ಆಗ ನಿಮಗೆ ಎಷ್ಟು ಸಂಬಳ ಇತ್ತು ಎಂದರೆ ಸಾಕ್ಷಿ 6 ಸಾವಿರ ಎಂದು ನುಡಿಯುತ್ತಾರೆ. ನಿಮ್ಮ ಸಂಬಳವು ನಿಮ್ಮ ಖಾತೆಗೆ ಬರುತ್ತಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿ ನಿಮ್ಮ ಸಂಬಳ, ಡೆಬಿಟ್ ಕಾರ್ಡು ನ್ನು ದುರಪಯೋಗಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 2013 ರಲ್ಲಿ ನೀವು ಏಕಾಏಕಿ ಬೆಂಗಳೂರಿನಿಂದ ಊರಿಗೆ ಬಂದಾಗ ಹಾಗೂ ನಿಮಗೆ ಮಗು ಜನಿಸಿದ ನಂತರವೂ ಆರೋಪಿ ಹಲವಾರು ಬಾರಿ ನಿಮ್ಮ ಮನೆಗೆ ಬಂದಿದ್ದರು ನೀವು ಬಾಗಿಲನ್ನು ತೆಗೆದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿ ಎಷ್ಟು ಬಾರಿ ಬಂದಿದ್ದಾರೆ ಎಂದರೆ ಸಾಕ್ಷಿ 2 ಬಾರಿ ಬಂದಿದ್ದಾರೆ ಎಂದು ನುಡಿಯುತ್ತಾರೆ.

ಮದುವೆಯ ಸಮಯದಲ್ಲಿ ಆರೋಪಿ ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಕಂಪೆನಿಯನ್ನು ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. ಅವರ ಕಂಪೆನಿ ಲಾಸ್ ಆಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಅವರ ಕಂಪೆನಿ ಲಾಸ್ ಆಗಿದ್ದರಿಂದ ನಿಮ್ಮ ಡಿಮಾಂಡನ್ನು ಆರೋಪಿ ಪೂರ್ಣಗೊಳಿಸಲು ಆಗುವುದಿಲ್ಲವೆಂಬ ಕಾರಣದಿಂದಲೇ ನೀವು ಜಗಳ ಮಾಡಿ ನಿಮ್ಮ ಮನೆಗೆ ಬಂದಿದ್ದು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ನಿಮ್ಮ ಮನೆಗೆ ಬಂದು 5 ಲಕ್ಷ ವರದಕ್ಷಿಣೆ ಹಾಗೂ 40 ಪವನ್ ಚಿನ್ನದ ಬೇಡಿಕೆ ಇಟ್ಟಿರಲಿಲ್ಲ ಹಾಗೂ ನೀವು ಆರೋಪಿಗೆ ರೂಪಾಯಿ 2 ಲಕ್ಷ ಹಣವನ್ನು ಮತ್ತು 20 ಪವನ್ ಚಿನ್ನವನ್ನು ಆರೋಪಿಗೆ

ಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ.

ನಿಮಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಹಾಗೂ ನಿಮ್ಮ ಮಗುವಿನ ಎಲ್ಲಾ ವೈದ್ಯಕೀಯ ಖರ್ಚುಗಳನ್ನು ಆರೋಪಿ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಬೆಂಗಳೂರಿನ ಗಾಯತ್ರಿ ಆಸ್ಪತ್ರೆಯಲ್ಲಿ ಸೇರಿಕೆಯಾದಾಗಲೂ ಸಹ ಎಲ್ಲಾ ಖರ್ಚನ್ನು ಆರೋಪಿಯೇ ಭರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ನನ್ನ ತಮ್ಮ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಇಲ್ಲಿಯವರೆಗೂ ನಿಮ್ಮ ಮಗು ಎಲ್ಲಿ ಇದೆ ಎಂದು ಹೇಳಿರುವುದಿಲ್ಲ ಹಾಗೂ ಅವರು ಮಗುವನ್ನು ನೋಡಬೇಕು ಎಂದಾಗಲೂ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನೀವು ಖಾಸಗಿ ದೂರನ್ನು ಸಲ್ಲಿಸಿದ ನಂತರ ಪೊಲೀಸರು ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ನೀವು ಠಾಣೆಯಲ್ಲಿಯೇ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯ ಮನೆಯ ಹತ್ತಿರವೂ ಸಹ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಕುಂದಾಪುರದ ಠಾಣೆಯಲ್ಲಿಯೇ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದಿಃ 31-07-2018 ರಂದು ಯಾವುದೇ ಸ್ವತ್ತು ಪಂಚನಾಮೆಯನ್ನು ಜರುಗಿಸಿಲ್ಲ ಹಾಗೂ ನೀವು ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಕೆಲವು ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಹಾಗೂ ಅವರ ಕುಟುಂಬದವರು ನಿಮಗೆ ಯಾವುದೇ ವರದಕ್ಷಿಣೆ ಕಿರುಕುಳ ನೀಡಿಲ್ಲ, ದೈಹಿಕ ಹಿಂಸೆ ಹಾಗೂ ಮಾನಸಿಕ ಹಿಂಸೆ ನೀಡಿರುವುದಿಲ್ಲ ಮತ್ತು ಹಲ್ಲೆ ಮಾಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಂತಹ ಘಟನೆ ನಡೆದಿದ್ದರೆ ನೀವು ಪೊಲೀಸ್ ದೂರನ್ನು ದಾಖಲಿಸುತ್ತಿದ್ದೀರಿ ವಕೀಲರ ಮೂಲಕ ಖಾಸಗಿ

ದೂರನ್ನು ಸಲ್ಲಿಸುವುದಿಲ್ಲ ಎಂದರೆ ಸಾಕ್ಷಿ ಆರೋಪಿಗೆ ಹಲವು ಬಾರಿ ಅವಕಾಶ ಕೊಟ್ಟರೂ ಸರಿ ಹೋಗದ ಕಾರಣ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಎಂದಿಗೂ ತಪ್ಪು ಮಾಡಿರುವುದಿಲ್ಲ ನಿಮ್ಮ ಉದ್ದಟತನದಿಂದ ನೀವು ಮನೆಯನ್ನು ಬಿಟ್ಟು ಬಂದು ಆರೋಪಿಯ ವಿರುದ್ದ ಸುಳ್ಳು ಆರೋಪ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪಂಚನಾಮೆ ಜರುಗಿಸುವ ಸಮಯದಲ್ಲಿ ಪೊಲೀಸರು ನಿಮ್ಮ ಹೇಳಿಕೆ ಪಡೆದಿರುತ್ತಾರಾ ಎಂದರೆ ಸಾಕ್ಷಿ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮಹಜರು ಸಮಯದಲ್ಲಿ ಯಾವುದೇ ಪೋಟೋ ತೆಗೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ